# ಕನ್ನಡ ಸಾಹಿತ್ಯ ಪರಿಷತ್ತು

**ಬೆಂಗಳೂರು – ೧೮**

## ಕನ್ನಡ ಕಾವ ಪರೀಕ್ಷೆ – ೨೦೧೫

**ಪ್ರಶ್ನೆಪತ್ರಿಕೆ – ೧**

## ಕನ್ನಡ ಗದ್ಯ – ಪದ್ಯ – ಸಾಹಿತ್ಯ

[ಮರುಪರೀಕ್ಷೆ ವಿದ್ಯಾರ್ಥಿಗಳಿಗೂ ಅನ್ವಯಿಸುತ್ತದೆ]

**ಅವಧಿ : ೩ ಗಂಟೆಗಳು** **ಗರಿಷ್ಠ ಅಂಕಗಳು : ೯೦**

### ಕಾವ್ಯ ಭಾಗ

**I. ಕೆಳಗಿನ ಒಂದು ಪದ್ಯಕ್ಕೆ ಭಾವಾರ್ಥ ಬರೆಯಿರಿ.** ೫

(೧) ಗುರುಗಳು, ಶಿಷ್ಯರು, ಮನೆಗಳು, ಮಠಗಳು
ಎಲ್ಲರು ಬೆಂದರು ಬಡಬಾಗ್ನಿಯಲಿ
ಬಡವರ ಬಗ್ಗರ ಜಠರಾಗ್ನಿಯಲಿ !
ಬಡವನ ಜಠರಾಗ್ನಿಯೆ ಬಡಬಾಗ್ನಿ !
ಬಡವನೆ ಕಲಿಯುಗದಂತ್ಯದ ಕಲ್ಕಿ !

(೨) ಬೆದರಿಸಲು ಭಿಕ್ಷುಕರ ಹುಡುಗರನ್ನ,
ಬೀದಿಕುನ್ನಿಯ, ಪೋಲಿದನಗಳನ್ನ
ಎದುರಿಸಲು ಮಳೆ ಬಿಸಿಲ ದಾಳಿಯನ್ನ
ಸಾಲುಮರಗಳ ಹಕ್ಕಿ ಹಿಕ್ಕೆಯನ್ನ

**II. ಕೆಳಗಿನ ಮೂರಕ್ಕೆ ಸಂದರ್ಭ ಸಹಿತ ಸ್ವಾರಸ್ಯ ಬರೆಯಿರಿ.** ೯

೧. ಕುಡಿದನು ರಕ್ತವ ಮೊಗೆ ಮೊಗೆದು
೨. ಬಿಕ್ಕಿ ನೀನಳುವಷ್ಟು ಕಷ್ಟ ಅದೇನವ್ವ
೩. ಗೆರೆ ದಾಟಲಾರದೆ ನಾನು ಕಾಯುತ್ತಿದ್ದೇನೆ
೪. ಹತ್ತು ದಿಕ್ಕುಗಳಲ್ಲಿ ಮುತ್ತು ರತ್ನದ ದೀಪ
೫. ಒಲೆ ಬದಲಾದರೇನು ಉರಿ ಬದಲಾಗಿದೆಯೆ?

**III. ಮೂರಕ್ಕೆ ಟಿಪ್ಪಣಿ ಬರೆಯಿರಿ.** ೬

೧. ಪು.ತಿ.ನ. ೨. ಲಂಕೇಶ್ ೩. ಒಲೆ
೪. ನಿವೃತ್ತಿ ೫. ಗಾಂಧಿ ಬಜಾರು

**IV. ಕೆಳಗಿನ ಎರಡು ಪ್ರಶ್ನೆಗಳಿಗೆ ಉತ್ತರಿಸಿ.** ೧೦

೧) ರಾಜರತ್ನಂರವರ ಕನ್ನಡ ಪ್ರೇಮವೆಂತಹದ್ದು?
೨) ರಾಜ್ಯವಾಳುವ ಯೋಗ ಕೆಂಪೇಗೌಡನಿಗೆ ಬಂದದ್ದು ಹೇಗೆ?
೩) 'ಮನೆ' ಕವಿತೆಯ ನಿರೂಪಕರ ತಲ್ಲಣಗಳೇನು?

(ಪು.ತಿ.ನೋ.)



**V. ಒಂದು ಪ್ರಶ್ನೆಗೆ ಉತ್ತರಿಸಿ.** ೧೦

೧. ಜೀವ ಅಶಾಶ್ವತವಾದುದು ಎಂಬುದನ್ನು 'ಸುಧೀರ' ಕವಿತೆ ನಿರೂಪಿಸುವ ಬಗೆಯನ್ನು ಚರ್ಚಿಸಿ.
೨. ಗಂಡ–ಹೆಂಡತಿಯ ಮಧುರ ದಾಂಪತ್ಯ ಕವಿತೆಯಲ್ಲಿ ಹೇಗೆ ಅಭಿವ್ಯಕ್ತಗೊಂಡಿದೆ? ವಿವರಿಸಿ.

### ಗದ್ಯ ಭಾಗ

**I. ಕೆಳಗಿನ ಐದು ಪದಗಳನ್ನು ಸ್ವಂತವಾಕ್ಯದಲ್ಲಿ ಬಳಸಿ.** ೫

೧. ಉದಾಸೀನ ೨. ಜಲಪಾತ ೩. ಪಾನಕ ೪. ಸಮಾಲೋಚನೆ
೫. ಶಿಕಾರಿ ೬. ಗುಟುರು ೭. ದುರ್ನಾತ

**II. ಚೆಲ್ಲಾಪಿಲ್ಲಿಯಾಗಿರುವ ಪದಗಳನ್ನು ಅರ್ಥಪೂರ್ಣವಾಗಿ ರೂಪಿಸಿ.** ೫

೧. ಬಹಳ ಹುಟ್ಟಿನಿಂದಲೇ ಸುನೀತ ಚುರುಕು
೨. ಸಾಧ್ಯವಿರಲಿಲ್ಲ ನಾಯಕನೊಬ್ಬನನ್ನು ಬಸವಣ್ಣನಷ್ಟೇ ರೂಪಿಸಿಕೊಳ್ಳುವುದು ಯೋಗ್ಯ ದಲಿತರಿಗೆ
೩. ಭಾರತದಲ್ಲಿ ಈ ವೈಪರಿತ್ಯಕ್ಕೆ ಅಮೇರಿಕಾದ ಸ್ವಲ್ಪ ಮಟ್ಟಿನ ಉತ್ತರವಿದೆ
೪. ವಿರುದ್ಧ ಶಕ್ತಿಯಾಗಿ ಕಾಂಗ್ರೆಸ್ಸಿಗೆ ಇದ್ದರು ಅಂಬೇಡ್ಕರ್
೫. ಜನಜೀವನ ಜಾನಪದದ ಪರಂಪರೆಯಲ್ಲಿ ಹಾಸುಹೊಕ್ಕಾಗಿದೆ

**III. ಎರಡು ವಿಷಯಗಳಿಗೆ ಟಿಪ್ಪಣಿ ಬರೆಯಿರಿ.** ೧೦

೧. ಜಾನಪದ ೨. ಅಭ್ಯಂಜನ ೩. ಸತ್ಯಾಗ್ರಹ

**IV. ಎರಡು ಪ್ರಶ್ನೆಗಳಿಗೆ ಉತ್ತರಿಸಿ.** ೧೦

೧. ಎಮ್ಮೆ ಕರುವನ್ನು ಬಿಸಾಡುವುದನ್ನು ತಡೆಯಲು ನಡೆಸಿದ ಪ್ರಯತ್ನದ ಫಲವನ್ನು ಚಿತ್ರಿಸಿ.
೨. ಬೈರನ ವ್ಯಕ್ತಿತ್ವವನ್ನು ಪರಿಚಯಿಸಿ.
೩. ಬುಲ್ಡೋಜರ್‌ನ ದುಷ್ಪರಿಣಾಮಗಳನ್ನು ತಿಳಿಸಿ.

**V. ಎರಡು ಪ್ರಶ್ನೆಗಳಿಗೆ ಉತ್ತರಿಸಿ.** ೨೦

೧. ಹೆಂಡತಿಯ ಹೆಸರು ಹೇಳಲೇಬೇಕಾದ ಅನಿವಾರ್ಯತೆಯನ್ನು ಲೇಖಕರು ಹೇಗೆ ನಿರೂಪಿಸಿದ್ದಾರೆ? ವಿವರಿಸಿ.
೨. ಧರ್ಮ ಎಂದರೇನು? ಅದು ರೂಪುಗೊಳ್ಳುವ ಬಗೆಯನ್ನು ನಿದರ್ಶನಗಳೊಡನೆ ವಿಶ್ಲೇಷಿಸಿ.
೩. ಜಾನಪದ ನೀಡುವ ಶಿಕ್ಷಣವನನು ವಿವರಿಸಿ.

***

# ಕನ್ನಡ ಸಾಹಿತ್ಯ ಪರಿಷತ್ತು

ಬೆಂಗಳೂರು – ೧೮

## ಕನ್ನಡ ಕಾವ ಪರೀಕ್ಷೆ – ೨೦೧೫

ಪ್ರಶ್ನೆಪತ್ರಿಕೆ – ೨

## ವ್ಯಾವಹಾರಿಕ ಕನ್ನಡ ಮತ್ತು ಸಂವಹನ ಕನ್ನಡ

[ಮರುಪರೀಕ್ಷೆ ವಿದ್ಯಾರ್ಥಿಗಳಿಗೂ ಅನ್ವಯಿಸುತ್ತದೆ]

**ಅವಧಿ : ೩ ಗಂಟೆಗಳು** **ಗರಿಷ್ಠ ಅಂಕಗಳು : ೯೦**

### ಭಾಗ – ೧ – ವ್ಯಾವಹಾರಿಕ ಕನ್ನಡ

**ಅ. ಮೂರು ಪ್ರಶ್ನೆಗಳಿಗೆ ಉತ್ತರಿಸಿ.** ೩೦

೧. ವ್ಯಾವಹಾರಿಕ ಪತ್ರಗಳ ಅಗತ್ಯವೇನು? ಅದರ ವಿವಿಧ ಅಂಗಗಳು ವ್ಯವಹಾರಕ್ಕೆ ಒಂದು ಕ್ರಮಬದ್ಧತೆಯನ್ನು ಹೇಗೆ ತಂದುಕೊಡುತ್ತವೆ?

೨. ಪಠ್ಯಪುಸ್ತಕಗಳ ಖರೀದಿಗಾಗಿ ಗ್ರಾಹಕ ಬರೆದ ವಿಚಾರಣಾ ಪತ್ರ ಮತ್ತು ಅದಕ್ಕೆ ಪುಸ್ತಕ ಮಳಿಗೆಯವರು ಬರೆದ ಪ್ರತ್ಯುತ್ತರ ಪತ್ರದ ಮಾದರಿಯನ್ನು ಸಿದ್ಧಪಡಿಸಿ.

೩. ಸುತ್ತೋಲೆ ಎಂದರೇನು? ಆಡಳಿತ ವ್ಯವಹಾರಗಳಲ್ಲಿ ಕನ್ನಡದ ಬಳಕೆ ಕುರಿತು ಸರ್ಕಾರ ಹೊರಡಿಸಿದ ಸುತ್ತೋಲೆಯ ಮಾದರಿಯನ್ನು ಬರೆಯಿರಿ.

೪. ವೃತ್ತಪತ್ರಿಕೆಗಳಲ್ಲಿ ಪ್ರಕಟವಾಗುವ ಪತ್ರಗಳ ಪ್ರಾಮುಖ್ಯವೇನು? 'ವಾಚಕರವಾಣಿ'ಯ ಪತ್ರದ ಮಾದರಿಯೊಂದನ್ನು ಸಿದ್ಧಪಡಿಸಿ.

೫. ಆಹ್ವಾನಪತ್ರಿಕೆಯ ಸ್ವರೂಪ, ಲಕ್ಷಣಗಳನ್ನು ವಿವರಿಸಿ ಅದರ ಮಾದರಿಯೊಂದನ್ನು ಸಿದ್ಧಗೊಳಿಸಿ.

**ಆ. ನಾಲ್ಕಕ್ಕೆ ಟಿಪ್ಪಣಿ ಬರೆಯಿರಿ.** ೨೦

೧. ಅಭ್ಯರ್ಥನ

೨. ಅರೆ ಸರ್ಕಾರಿ ಪತ್ರ

೩. ಅಧಿಕೃತ ಜ್ಞಾಪನ

೪. ಸಾರ್ವಜನಿಕ ದೂರುಗಳು

೫. ಸಭೆಯ ತಿಳುವಳಿಕೆ ಮತ್ತು ಕಾರ್ಯಸೂಚಿ

೬. ಏಕವ್ಯಕ್ತಿ ವರದಿ

### ಭಾಗ – ೨ – ಸಂವಹನ ಕನ್ನಡ

**ಅ. ಎರಡು ಪ್ರಶ್ನೆಗಳಿಗೆ ಉತ್ತರಿಸಿ.** ೨೦

೧) ಸಂವಹನದ ದೃಷ್ಟಿಯಿಂದ ಆಡುನುಡಿಗೂ ಬರವಣಿಗೆಗೂ ಇರುವ ವ್ಯತ್ಯಾಸವೇನು? ವಿಶದಪಡಿಸಿ.

೨) ಸಂವಹನದ ವಿಧಗಳಲ್ಲಿ 'ವಿಶ್ಲೇಷಣೆ' ಮತ್ತು 'ಕಥನಾತ್ಮಕ ನಿರೂಪಣೆ' ಕುರಿತು ಬರೆಯಿರಿ.

೩) ಸಾರ್ವಜನಿಕ ಸಂವಹನದ ಮಾಧ್ಯಮವಾಗಿ ಭಿತ್ತಿಪತ್ರಗಳು ಮತ್ತು ಗೋಡೆಬರಹಗಳು ಹೇಗೆ ಬಳಕೆಯಾಗುತ್ತವೆ?

೪) ಜಾಹಿರಾತು ಎಂದರೇನು? ಆಧುನಿಕ ಸಂವಹನ ಮಾಧ್ಯಮವಾಗಿ ಅದರ ಪ್ರಭಾವವೇನು? ವಿವರಿಸಿ.

**ಆ. ನಾಲ್ಕಕ್ಕೆ ಟಿಪ್ಪಣಿ ಬರೆಯಿರಿ.** ೨೦

೧. ಸಂವಹನ ಮಾಧ್ಯಮವಾಗಿ ಭಾಷೆ

೨. ನಾಟಕೀಯ ನಿರೂಪಣೆ

೩. ಕರಪತ್ರಗಳು

೪. ಭಾವ ನಿರೂಪಣೆ

೫. ಮಾಹಿತಿ ಪೂರೈಕೆ

೬. ಪ್ರಕಟಣ ಫಲಕಗಳು

***

(ಪು.ತಿ.ನೋ.)

ಕಾ / ೨